ಗಾಂಧಿನಗರ ಪೋಸ್ಟ್

# ಅಮರ್ ಬರ್ತಿದಾನೆ...



ಲೋಕಸಭಾ ಚುನಾವಣೆಯ ಹಣಾಹಣಿ ಮುಗಿದಿದೆ. ಸುಮಲತಾ ಅಂಬರೀಷ್ ಮಂಡ್ಯದಲ್ಲಿ ಎಬ್ಬಿಸಿದ ಹವೆಗೆ ಇಡೀ ಕರ್ನಾಟಕವೇ ದಂಗುಬಡಿದಿದೆ. ಅತ್ತ ಅಮ್ಮ ಚುನಾವಣಾ ಪರೀಕ್ಷೆಯ ಫಲಿತಾಂಶಕ್ಕಾಗಿ ಎದುರು ನೋಡುತ್ತಿದ್ದರೆ, ಇತ್ತ ಮಗ ಅಭಿಷೇಕ್, ಮೊದಲ ಸಿನಿಮಾಗೆ ಜನರಿಂದ ಸಿಗುವ ಅಂಕಗಳ ನಿರೀಕ್ಷೆಯಲ್ಲಿದ್ದಾರೆ.

ಅಂಬರೀಷ್ ತಮ್ಮ ಮಗ ಅಭಿಷೇಕ್‌ನನ್ನು ಅದ್ದೂರಿಯಾಗಿ ಪರಿಚಯಿಸಬೇಕು ಎಂಬ ಇರಾದೆ ಹೊಂದಿದ್ದರು. ಅಭಿಯ ಮೊದಲ ಸಿನಿಮಾ 'ಅಮರ್', ಮುಹೂರ್ತ ಸಂದರ್ಭದಲ್ಲಿ ಈ ಆಸೆಯನ್ನು ಪತ್ರಕರ್ತರೊಂದಿಗೆ ಹಂಚಿಕೊಂಡಿದ್ದರು. ಆದರೆ ಅದು ಈಡೇರಲಿಲ್ಲ. ಅವರ ನಿಧನದ ನಂತರ ಅಂಬಿ ಕುಟುಂಬ ಬಹುದೊಡ್ಡ 'ಪೊಲಿಟಿಕಲ್ ಡ್ರಾಮಾ'ಗೆ ಸಾಕ್ಷಿಯಾಗಬೇಕಾಯಿತು. ಇದರ ಜೊತೆಜೊತೆಗೇ 'ಅಮರ್ ಚಿತ್ರದ ಕೆಲಸವೂ ಸಾಗುತ್ತಿತ್ತು. ಇದೀಗ 'ಅಮರ್' ತೆರೆಗೆ ಬರಲು ಮುಹೂರ್ತ ಫಿಕ್ಸ್ ಆಗಿದೆ.

ಮೇ 31ರಂದು ಅಭಿ, 'ಅಮರ್' ಆಗಿ ಕನ್ನಡ ಸಿನಿಮಾಪ್ರೇಮಿಗಳ ಎದುರಿಗೆ ಬರಲಿದ್ದಾರೆ. ನಾಗಶೇಖರ್ ನಿರ್ದೇಶನದ ಈ ಚಿತ್ರದಲ್ಲಿ ತಾನ್ಯಾ ಹೋಪ್ ನಾಯಕಿಯಾಗಿ ನಟಿಸಿದ್ದಾರೆ. ಚಿಕ್ಕಣ್ಣ ನಾಯಕನಿಗೆ ಸ್ನೇಹದ ಸಾತ್ ನೀಡುವುದರ ಜತೆಗೆ ಪ್ರೇಕ್ಷಕರಿಗೆ ಹಾಸ್ಯದ ರಸದೌತಣವನ್ನೂ ಉಣಿಸಲಿದ್ದಾರೆ. ನಾಗರಾಜ್ ನಿರ್ಮಾಣದಲ್ಲಿ ಮೂಡಿಬರುತ್ತಿರುವ ಈ ಚಿತ್ರದಲ್ಲಿ ಅಭಿ, ಮಾಸ್ ಹಾಗೂ ಕ್ಲಾಸ್ ಎರಡೂ ವರ್ಗದ ಪ್ರೇಕ್ಷಕರಿಗೆ ಇಷ್ಟವಾಗುವ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರಂತೆ.

ಇದೊಂದು ಪಯಣದ ಕಥೆಯಾಗಿದ್ದು, ಅಂಬಿಯ ಮಗನ ಬಣ್ಣದ ಬದುಕಿನ ಪಯಣವೂ ಇದರ ಮೂಲಕವೇ ಶುರುವಾಗುತ್ತಿದೆ. ಅಮ್ಮನ ಚುನಾವಣೆಯ ಫಲಿತಾಂಶ ಮತ್ತು ಮಗನ ನಟನಾ ಫಲಿತಾಂಶ ಎರಡನ್ನೂ ರೆಬಲ್ ಸ್ಟಾರ್ ಅಭಿಮಾನಿಗಳು ಕುತೂಹಲದಿಂದ ಎದುರುನೋಡುತ್ತಿರುವುದಂತೂ ಸತ್ಯ.

# ಹರ್ಷಿಕಾ ಬಂಡಾಯ!



ಹರ್ಷಿಕಾ ಪೂಣಚ್ಚ ಅವರನ್ನು ಹಿರಿತೆರೆಗೆ ಪರಿಚಯಿಸಿದ ಸಿನಿಮಾದ ಹೆಸರು 'ಪಿಯುಸಿ'. ಆ ಸಿನಿಮಾದಲ್ಲಿ ನಟಿಸುವಾಗ ಅವರು ಓದುತ್ತಿದ್ದುದೂ ಪಿಯುಸಿ. ಹೀಗೆ ಎಳವೆಯಲ್ಲಿಯೇ ಬಣ್ಣದ ಲೋಕಕ್ಕೆ ಬಂದ ಅವರು ಪುನೀತ್, ಶಿವರಾಜ್‌ಕುಮಾರ್, ರಮೇಶ್ ಅರವಿಂದ್ ಹೀಗೆ ಹಲವು ಸ್ಟಾರ್ ನಟರ ಜತೆಗೆ ತೆರೆಯನ್ನು ಹಂಚಿಕೊಂಡಿದ್ದಾರೆ. ಆದರೆ ಯಾಕೋ ಹರ್ಷಿಕಾಗೆ ಸ್ಯಾಂಡಲ್‌ವುಡ್‌ನಲ್ಲಿ ಆರಕ್ಕೇರಲು ಸಾಧ್ಯವಾಗಲಿಲ್ಲ.

ಬಾಲಿವುಡ್‌ನಲ್ಲಿಯೂ ಅದೃಷ್ಟಪರೀಕ್ಷೆ ಮಾಡಿಕೊಳ್ಳಲು ಹೋಗಿ ಕೆಲಕಾಲ ಇದ್ದು ವಾಪಸ್ ಬಂದ ಅವರು 'ಅಲ್ಲಿ ನನಗೆ ಎದುರಾಗಿದ್ದು ಕಿರುಕುಳದ ಅಗ್ನಿಪರೀಕ್ಷೆ' ಎಂಬರ್ಥದ ಮಾತುಗಳನ್ನಾಡಿದ್ದರು.

ನಟಿಸುತ್ತಿರುವ ಸಿನಿಮಾಗಳ ಸಂಖ್ಯೆ ಹೆಚ್ಚಿಲ್ಲದಿದ್ದರೂ ಸಾಮಾಜಿಕ ಜಾಲತಾಣಗಳು ಮತ್ತು ಮಾಧ್ಯಮಗಳಲ್ಲಿ ಆಗೀಗ ಸುದ್ದಿಯಾಗುತ್ತಲೇ ಇರುತ್ತಾರೆ ಹರ್ಷಿಕಾ. ಬಣ್ಣದ ಲೋಕದ ಕೆರಿಯರ್ ಮೇಲೆಯೇ ಗಮನ ಕೇಂದ್ರೀಕರಿಸಿದ್ದ ಅವರೀಗ ಸಾಮಾಜಿಕ ಜವಾಬ್ದಾರಿಯತ್ತಲೂ ಕಣ್ಣುಹಾಯಿಸಲು ಶುರುಮಾಡಿದ್ದಾರೆ. ಇತ್ತೀಚೆಗೆ ರಾಯಚೂರಿನಲ್ಲಿ ಮಧು ಎಂಬ ಹುಡುಗಿಯ ಮೇಲೆ ನಡೆದ ಅಮಾನುಷ ಅತ್ಯಾಚಾರ ಪ್ರಕರಣವನ್ನು ಕೇಳಿ ಅವರ ಮನಸ್ಸು ಕಲಕಿದೆ. ತಕ್ಷಣವೇ ರಾಯಚೂರಿಗೆ ಹೋಗಿ ಕುಟುಂಬಕ್ಕೆ ಸಾಂತ್ವನವನ್ನೂ ಹೇಳಿ ಬಂದಿದ್ದಾರೆ. ಅಷ್ಟಕ್ಕೇ ಸುಮ್ಮನಾಗದೆ ಸಾಮಾಜಿಕ ಜಾಲತಾಣಗಳಲ್ಲಿ ನಿರಂತರವಾಗಿ ಈ ಕುರಿತು ತಮ್ಮ ಚಟುವಟಿಕೆಗಳನ್ನು ಪೋಸ್ಟ್ ಮಾಡುತ್ತಾ, ಮಾಧ್ಯಮಮಿತ್ರರಿಗೆ ವಿಡಿಯೊ ಬೈಟ್‌ಗಳನ್ನು ಕಳುಹಿಸಿಕೊಡುತ್ತ ತನ್ನ ಈ ಪ್ರತಿಭಟನೆಯ ಸದುದ್ದೇಶವನ್ನು ಜನರಿಗೂ ತಿಳಿಯಪಡಿಸುವ ಕೆಲಸ ಮಾಡಿದ್ದಾರೆ. 'ಮಹಿಳೆಯ ಮೇಲೆ ದೌರ್ಜನ್ಯ ನಿಲ್ಲಲೇಬೇಕು. ಅತ್ಯಾಚಾರ ಕೊನೆಗೊಳ್ಳಬೇಕು' ಎಂದು ಭಾವುಕರಾಗಿ ಮಾತನಾಡಿದ್ದಾರೆ.

ಕೆಲದಿನಗಳ ಹಿಂದೆ ಶ್ರುತಿ ಹರಿಹರನ್, ಅರ್ಜುನ್ ಸರ್ಜಾ ಮೇಲೆ 'ಮೀಟೂ' ಆರೋಪ ಮಾಡಿದಾಗ, ಶ್ರುತಿ ವಿರುದ್ಧ ಹಿಗ್ಗಾಮುಗ್ಗಾ ಬ್ಯಾಟಿಂಗ್ ಮಾಡಿ ಕಿಡಿಕಾರಿದ್ದ ಹರ್ಷಿಕಾಳ ಈಗಿನ ವರಸೆ ನೋಡಿ ಗಾಂಧಿನಗರದ ಗಲ್ಲಿಮಂದಿ 'ಹಿಂಗ್ಯಾಕೆ ಹಿಂಗ್ಯಾಕೆ...' ಎಂದು ಗುನುಗಿಕೊಳ್ಳುತ್ತಿದ್ದಾರಂತೆ.